# ಹಿರಿಯ ಸಿವಿಲ್ ಮತ್ತು ಜೆ ಎಂ ಎಫ್ ಸಿ ನ್ಯಾಯಾಲಯ, ಹಿರಿಯೂರು

## ಸಿ.ಸಿ ನಂ.13/2023

| | | | |
|---|---|---|---|
| ಸಾಕ್ಷಿದಾರರ ಹೆಸರು | – | ರಾಮಕೃಷ್ಣ | ಸಿಡಬ್ಲ್ಯೂ-3 |
| ತಂದೆಯ ಹೆಸರು | – | ಜಯಣ್ಣ | ಪಿಡಬ್ಲ್ಯೂ-3 |
| ವಯಸ್ಸು | – | 44 ವರ್ಷ | |
| ಉದ್ಯೋಗ | – | ವ್ಯವಸಾಯ | |
| ವಾಸ | – | ಆನೆಸಿದ್ರಿ ಗ್ರಾಮ | |

**ದಿನಾಂಕಃ06.03.2024 ರಂದು ಸಾಕ್ಷಿಯನ್ನು ಕರೆಸಲಾಯಿತು ಮತ್ತು ಪ್ರಮಾಣ ವಚನ ಬೋಧಿಸಲಾಯಿತು.**

**ಸಾಕ್ಷಿದಾರರ ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದ**

ಚಾಸಾ.2 ಮತ್ತು 4 ನನಗೆ ಪರಿಚಯವಿದ್ದಾರೆ. ಸಾಕ್ಷಿಗೆ ನಿಪಿ-2 ,3 ರ ದಾಖಲೆಗಳನ್ನು ತೋರಿಸಲಾಗಿ ಅವುಗಳಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ್ದರಿಂದ ಸಹಿಗಳನ್ನು ನಿಪಿ-2(ಬಿ) ಮತ್ತು 3(ಬಿ) ಎಂದು ಗುರುತಿಸಲಾಯಿತು. ಅಂದಾಜು 2 ವರ್ಷಗಳ ಹಿಂದೆ ಶನೇಶ್ವರ ದೇವಸ್ಥಾನದ ಸಮೀಪ ಅಂದರೆ ಆನೆಸಿದ್ರಿ ಗೇಟ್ ಬಳಿ ಈ ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಆದರೆಯಾವ ಕಾರಣಕ್ಕೆ ಸಹಿಮಾಡಿದ್ದೇನೆ ಎಂದು ಗೊತ್ತಿಲ್ಲ. ಪೊಲೀಸರು ಪಂಚನಾಮೆ ಮಾಡಿದ್ದೇವೆ ಸಹಿ ಮಾಡಿದ ಎಂದು ದಾಖಲೆಗೆ ಸಹಿ ಪಡೆದಿದ್ದಾರೆ. ಅದೇ ರೀತಿ ಸಾಕ್ಷಿಯು ನಿಪಿ-4 ಪೋಟೋದಲ್ಲಿ ತಾನು ಇರುವುದನ್ನು ಗುರುತಿಸಿದ್ದಾರೆ. ಸದರಿ ಪೋಟೋ ಶನೇಶ್ವರ ದೇವಸ್ಥಾನದ ಬಳಿ ತೆಗೆದಿ ರುತ್ತಾರೆ. ಆದರೆ ಯಾವ ಕಾರಣಕ್ಕೆ ತೆಗೆದಿದ್ದಾರೆ ಎಂದು ಗೊತ್ತಿಲ್ಲ. ಪೊಲೀಸರು ನಮ್ಮ ಸಮಕ್ಷಮಯಾವುದೇ ವಾಹನ ಅಮಾನತ್ತು ಪಡಿಸಿಕೊಂಡಿಲ್ಲ ಮತ್ತು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ. ನನ್ನ ಜೊತೆ ಈ ಎರಡು ದಾಖಲೆಗಳಿಗೆ ಚಾಸಾ.2 ಮತ್ತು 4 ಸಹ ಸಹಿ ಮಾಡಿದ್ದಾರೆ. ಆದರೆ ನಿಪಿ-2, 3 ದಾಖಲೆಗಳಲ್ಲಿ ಏನು ಬರೆಯಲಾಗಿದೆ ಎಂದು ಗೊತ್ತಿಲ್ಲ. ಆದರೆ ಅದರಲ್ಲಿರುವ ಒಕ್ಕಣೆಗಳನ್ನು ಪೊಲೀಸರು ಓದಿ ಹೇಳಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಮತ್ತು ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಸ ಸ ಅಭಿಯೋಜಕರು ಕೋರಿದ್ದರಿಂದ ಅನುಮತಿ ನೀಡಲಾಯಿತು)

**ಪಾಟೀ ಸವಾಲುಃ ಮಾನ್ಯ ಸ ಸ ಅ ರವರಿಂದಃ**

ದಿಃ04.08.2022 ರಂದು ಅಪಘಾತದ ಸ್ಥಳದಲ್ಲಿ ನಿಪಿ-2 ,3 ದಾಖಲೆಗಳಿಗೆ ಸಹಿ ಮಾಡಿದ್ದೇನೆ. ಆದರೆ ನಮ್ಮ ಸಮಕ್ಷಮ ಪೊಲೀಸರು ಯಾವುದೇ ಮಹಜರ್ ಕ್ರಮ ಜರುಗಿಸಿಲ್ಲ ಯಾವುದೇ ವಾಹನ ಅಮಾನತ್ತು ಪಡಿಸಿಕೊಂಡಿಲ್ಲ. ಸದರಿ ದಿನ ಪೊಲೀಸರು ವಾಹನ ನಂ.ಎಂ ಹೆಚ್ 45 ಎಲ್ 6367 ಈ ವಾಹನವನ್ನು ಅಮಾನತ್ತು ಪಡಿಸಿಕೊಂಡು ಬೆಳಿಗ್ಗೆ 10 ರಿಂದ 11 ರವರೆಗೆ ಆನೆಸ್ಥಿದ್ರಿ ಗೇಟ್ ಬಳಿ ಮಹಜರ್ ಮಾಡಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಮಹಜರ್ ಮಾಡುವ ಕಾಲಕ್ಕೆ ಕಚ್ಚಾ ನಕಾಶೆಯನ್ನು ತಯಾರಿಸಿ ನಮ್ಮ ಸಹಿ ಪಡೆದಿದ್ದಾರೆ ಎಂದರೆ ಸರಿಯಲ್ಲ. ಸದರಿ ಮಹಜರ್ ಮಾಡುವ ಕಾಲಕ್ಕೆ ನಿಪಿ-4 ರಂತೆ ಪೋಟೋ ತೆಗೆದು ನಕಾಶೆ ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಮೇಲೆ ಹೇಳಿದ ದಾಖಲೆಗಳನ್ನು ತಯಾರಿಸಿದ ಬಗ್ಗೆ ಎಲ್ಲಾ ವಿಷಯ ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ ಕೆ ವಕೀಲರಿಂದ-ಏನೂ ಇಲ್ಲ.**

ದಿಃ04.08.2022 ರಂದು ನಾನು ಸ್ಥಳದಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಆ ದಿನ ನಾವು ದೇವಸ್ಥಾನದ ಹತ್ತಿರ ನಡೆದುಕೊಂಡುಹೋಗುತ್ತಿದ್ದೆವು ಎಂದರೆ ನಿಜ. ಪೊಲೀಸರು ಬಂದು ದಾಖಲೆಗಳಿಗೆ ಸಹಿ ಮಾಡಿಸಿಕೊಂಡಿದ್ದಾರೆ ಎಂದರೆ ನಿಜ.ಅದರಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ನಿಜ. ಪೊಲೀಸರು ಅಪಘಾತದ ಬಗ್ಗೆ ನನಗೆ ಹೇಳಿಲ್ಲ ಎಂದರೆ ಸರಿಯಲ್ಲ. ಪಂಚನಾಮೆ ಬಗ್ಗೆ ನನಗೆ ಏನು ಗೊತ್ತಿರಲಿಲ್ಲ ನಡೆದುಕೊಂಡು ಹೋಗುವಾಗ ಏಕಾ ಏಕಿ ನನ್ನ ಸಹಿ ಪಡೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯು ಹೇಳಿದ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು )

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ , ಹಿರಿಯೂರು